ಪೂರ್ಣಗೊಂಡಿರುವ 165 ಯೋಜನೆಗಳು ಸೇರಿದಂತೆ ಈವರೆಗೆ ರೂ 14,485 37 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ -

728 (986) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಆ) ಪ್ರಸ್ತುತ ಖರ್ಚಾಗಿ ಉಳಿದ ಹಣವೆಷ್ಟು ,

ಇ) ಈ ಮತ ಕ್ಷೇತ್ರದಲ್ಲಿ ಕೆರೆ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದೆಯೆಂದು ಸರ್ಕಾರಕ್ಕೆ ಪತ್ರ ಮುಖೇನ ಮನವಿ ಮಾಡಿರುವುದು ನಿಜವಲ್ಲವೆ ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ನೆಲಮಂಗಲ ಮತ ಕ್ಷೇತ್ರದ 12 ಕೆರೆಗಳ ಅಭಿವೃದ್ಧಿಗಾಗಿ ರೂ 234 41 ಲಕ್ಷಗಳ ಅಂದಾಜು ಮೊತ್ತ ನಿಗದಿಪಡಿಸಲಾಗಿದೆ

ಆ) ಡಿಸೆಂಬರ್ 2006ರ ಅಂತ್ಯದವರೆಗೆ ರೂ 80 21 ಲಕ್ಷಗಳು ವೆಚ್ಚವಾಗಿದೆ

ಇ) ನಿಜ

ಈ) ಈ ಬಗ್ಗೆ ಮುಖ್ಯ ಇಂಜಿನಿಯರ್‌ರವರಿಗೆ ತನಿಖೆ ನಡೆಸಿ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಮುಖ್ಯ ಇಂಜಿನಿಯರ್‌ರವರು ಸಲ್ಲಿಸುವ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು

729 (987) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಮೂಲಗಳು ಎಷ್ಟು , ಯಾವುವು ,

ಆ) ಈ ಮೂಲಗಳನ್ನು ಮನಶ್ಚೇತನಗೊಳಿಸಲು ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಇ) ಇದಕ್ಕಾಗಿ ಖರ್ಚಾಗಿರುವ ಮತ್ತು ಉಳಿಕೆಯಾಗಿರುವ ಹಣ ಎಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 3391 ಕೆರೆಗಳು, 402 ಏತ ನೀರಾವರಿ ಯೋಜನೆಗಳು, 698 ಅಣೆಕಟ್ಟು/ಪಿಕಪ್ ಬಾಂದಾರಗಳು ಹಾಗೂ 6 ಮಧ್ಯಮ ನೀರಾವರಿ ಯೋಜನೆಗಳು

P2
24